**<u>ಸಾಕ್ಷಿಯನ್ನು ದಿನಾಂಕ 21-02-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.</u>**

**<u>ಪಾಟೀಸವಾಲುಃ ಜೆಡಿಆರ್ ಪರ ವಕೀಲರಾದ ಶ್ರೀ ಕೆ.ಎಸ್.ಭಟ್ಟರವರಿಂದಃ</u>**

ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ಗೊತ್ತು. ತೀರ್ಪು ಋಣಿಯ ವೈಯಕ್ತಿಕ ಆಸ್ತಿಗಳ ಬಗ್ಗೆ ನಾನು ವಿಚಾರಿಸಿರುತ್ತೇನೆ. ಅದರ ಆಧಾರದಲ್ಲಿ ಅಪಘಾತದಲ್ಲಿ ನನ್ನ ಗಂಡ ಮೃತಪಡುವ ಕಾಲಕ್ಕೆ ಆತನಿಗೆ ಸಾಕಷ್ಟು ಜಮೀನುಗಳಿದ್ದವು. ಅದರ ಆಧಾರದಲ್ಲಿ ಪ್ರಮಾಣ ಪತ್ರಕ್ಕೆ ಮಾಹಿತಿ ನೀಡಿರುತ್ತೇನೆ. ಅಪಘಾತ ಆದ ನಂತರದಿಂದ ಆತ ನನಗೆ ಗೊತ್ತು. ಅಪಘಾತಕ್ಕೆ ಪೂರ್ವದಲ್ಲಿ ಗೊತ್ತಿರಲಿಲ್ಲ. ಅಪಘಾತ ಆದ ಒಂದು ತಿಂಗಳ ನಂತರದಲ್ಲಿ ಆತನ ಬಗ್ಗೆ ಚೌಕಾಶಿ ಮಾಡಿರುತ್ತೇನೆ. ಅಪಘಾತ ಆಗುವ ಕಾಲಕ್ಕೆ ಆತನಿಗೆ 2 ಬೋಟ್ ಗಳಿದ್ದವು. ನಾನು ಸಲ್ಲಿಸಿದ ಪರಿಹಾರ ಅರ್ಜಿ ತೀರ್ಮಾನ ಆಗುವ ಕಾಲಕ್ಕೆ ಒಂದು ಬೋಟನ್ನು ಮಾರಾಟ ಮಾಡಿದ್ದಾರೆ. ಇನ್ನೊಂದು ಬೋಟನ್ನು ಸಾಲಕ್ಕಾಗಿ ಮಾರಾಟ ಮಾಡಿದ್ದಾರೆ. ಬೋಟ್ ಇದ್ದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ತೀರ್ಪು ಋಣಿಯ ಮಗನ ಹೆಸರಿನಲ್ಲಿ, ಅಳಿಯನ ಹೆಸರಿನಲ್ಲಿ ಆತನೇ ಆಸ್ತಿ ಮಾಡಿದ್ದಾನೆ. ಆದರೆ ಈಗ ಅವುಗಳನ್ನು ಅವರು ಖರೀದಿಸಿದ್ದಾರೆ ಎಂದು ಹೇಳುತ್ತಿದ್ದಾರೆ. ನಾನು ಹಾಜರುಪಡಿಸಿರುವ ದಾಖಲೆಗಳಲ್ಲಿರುವ ಬೋಟ್ ನ ಮೇಲೆ ಸಾಲ ಇದೆ ಎಂದರೆ ಅದನ್ನು ತೋರಿಸಲು ಸಾಲ ಮಾಡಿದ್ದಾರೆ ಎನ್ನುತ್ತಾರೆ. ಬ್ಯಾಂಕ್ ನವರು ತೀರ್ಪು ಋಣಿಯ ಬೋಟನ್ನು ಈಗಾಗಲೇ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ತೀರ್ಪು ಋಣಿಯ ಯಾವ ಖಾತೆಗೆ ಎಷ್ಟು ಹಣ ಇದೆ ಎಂದು ನನಗೆ ಹೇಳಲು ಆಗುವುದಿಲ್ಲ, ಆ ಬಗ್ಗೆ ದಾಖಲೆಗಳನ್ನು ಆತನೆ ಹಾಜರುಪಡಿಸಬೇಕು.

ಮಧು ತಾಂಡೇಲ್ ತೀರ್ಪು ಋಣಿಯ ಹೆಂಡತಿ. ಆಕೆಯ ಹೆಸರಿನಲ್ಲಿಯೂ ಆಸ್ತಿ ಖರೀದಿಸಲಾಗಿದೆ. ಸದರಿ ಆಸ್ತಿಯನ್ನು ತೀರ್ಪು ಋಣಿಯೇ ಆಕೆಯ ಹೆಸರಿನಲ್ಲಿ ಖರೀದಿಸಿದ್ದಾನೆ. ಸದರಿ ಆಸ್ತಿ ಖರೀದಿಸಲು ತೀರ್ಪು ಋಣಿಯೇ ಹಣ ಕೊಟ್ಟಿದ್ದಾರೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಆ ರೀತಿ ದಾಖಲೆಗಳನ್ನು ಹಾಜರುಪಡಿಸಲು ಸಾಧ್ಯವಿಲ್ಲ. ಮಧು ತಾಂಡೇಲ್ 2023 ರಲ್ಲಿ ಆಸ್ತಿ ಖರೀದಿಸಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತೀರ್ಪು ಋಣಿಯ ಬಳಿ ಒಂದು ರೂಪಾಯಿಯೂ ಇಲ್ಲದಿದ್ದರೂ ಆತನ ವಿರುದ್ಧ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತೀರ್ಪು ಋಣಿಯ ನಿಖರವಾದ ವಯಸ್ಸನ್ನು ಹೇಳಲು ಆಗುವುದಿಲ್ಲ. ಅಂದಾಜು ಸುಮಾರು 60 ವರ್ಷ ಆಗಿರಬಹುದು. ಆತನಿಗೆ ಶಸ್ತ್ರ ಚಿಕಿತ್ಸೆ ಆಗಿದ್ದು, ಅಪಘಾತದ ಕಾರಣಕ್ಕೆ ಆತನಿಗೆ ದುಡಿಯುವ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**